Regd No BG 155

Sri "SATYAVADI"
— DAILY —
MYSORE 4
46 th Year

Protect the cow

—೫೯—

# ಸತ್ಯವಾದಿ
# SATYAVADI

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ಎ. ಸುಬ್ಬರಂಜಯ್ಯಂರು

28—5—1932

ಪ ಮುಖ ಸರ್ವಸಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

## ನಿಜಲಿಂಗಪ್ಪನವರ ಮಂತ್ರಿಮಂಡಲ ದಲ್ಲಿ ಹದಿನಾಲ್ಕು ಮಂತ್ರಿಗಳು

೦೦೦೦

## ಪಾರ್ಲಿಮೆಂಟರಿ ಸಮಿತಿಯ ಅಡ್ಡಿ ಸಂಭವವಿಲ್ಲ

ನವದೆಹಲಿ 28 — ಬುಧವಾರದ ದಿವಸ ವೈಸೂರು ರಾಜ್ಯ ಶಾಸನ ಸಭೆ ಕಾಂಗ್ರೆಸು ಪಕ್ಷದ ನಾಯಕರಾಗಿ ಶ್ರೀ ಎಸ್. ಆರ್. ಕಂಠಿಯವರು ಆಯ್ಕೆಯಾಗಿ ಬರುವ ಶ್ರೀ ಎಸ್. ನಿಜಲಿಂಗಪ್ಪನವರಿಗೆ ಅವಕಾಶವಾಡಲು ಇಂದು ಕಾಂಗ್ರೆಸು ಪಾರ್ಲಿಮೆಂಟರಿ ಸಮಿತಿಯು ಪೂರ್ವಭಾವಿ ಸಭೆ ಸೇರುವದು ಈಗಿರುವ ಮಂತ್ರಿಮಂಡಲದಲ್ಲಿನ ಸಂಖ್ಯೆ 14 ಮಾಡಲು 5 ಮಂದಿಯನ್ನು ತೆಗೆದು ಕೊಳ್ಳುವ ಬಗ್ಗೆ ನಿಜಲಿಂಗಪ್ಪನವರು ಆಪೇಕ್ಷಿಸಿದ್ದಾರೆ ಪಾರ್ಲಿಮೆಂಟರಿ ಸಮಿತಿ ಇದಕ್ಕೆ ಅಡ್ಡಿ ಬರಲಾರದು

## ಮುಂದಾಗಿಲ್ಲ

ಭಾರತ ಕಾಂಗ್ರೆಸು ಅಧ್ಯಕ್ಷರಾಗುವ ದಕ್ಕೆ ಯಾರೂ ಮುಂದಾಗಿಲ್ಲವೆಂದು ನವ ದೆಹಲಿ ವಾರ್ತೆ

## ಹೊಸ ಶಾಲೆಗಳಿಲ್ಲ

ಮುಂದಿನ ಶಿಕ್ಷಣ ವರ್ಷದಲ್ಲಿ ಪ್ರಾಥಮಿಕ ಶಾಲೆಗಳನ್ನು ಮುಂಜೂರ್ ಮಾಡುವುದಿಲ್ಲವೆಂದು ಕೇರಳದ ಮುಖ್ಯಮಂತ್ರಿ ಶ್ರೀ ಪಟ್ಟಂಥಾನು ಪಿಳ್ಳೈ ತಿಳಿಸಿದ್ದಾರೆ

## 20 ಜನರ ಮರಣ

ಬಿಲ್ಗ್ರೇಡ್ 27 — ಮೆಡ್ಡೂಬಿಸಿ ಒಳಿ ಸೇತುವೆ ಕುಸಿದು 20 ನಾಕರು ಮೃತ್ಯು

★ ಕೈರೊ 27 — ಜೀವಾವಧಿ ವರೆಗೆ ಸಂಯುಕ್ತ ಅರಬ ಗಣರಾಜ್ಯದ ಅಧ್ಯಕ್ಷ ರಾಗಿ ಜೀವಿಸಬೇಕೆಂಬ ಕಲಹೆಯನ್ನು ಅಧ್ಯಕ್ಷ ನಾಸೆರ್ ನಿರಾಕರಿಸಿದ್ದಾರೆ.

## ಎಚ್ಚರಿಕೆ

ವಾಷಿಂಗ್ಟನ್ 27 — ಇತ್ತೀಚಿಗೆ ನಡೆದ ವಿಶ್ವಭದ್ರತಾ ಸಮಿತಿಯಲ್ಲಿನ ಕಾಶ್ಮೀರದ ಚರ್ಚೆಯಲ್ಲಿ ಭಾರತದ ಬದಲಾಗದ ಹಾಗೂ ಸಂಧಾನವಲ್ಲದ ನಿಲುವಿನಿಂದ ಭಾರತ-ಪಾಕಿಸ್ತಾನದ ಬಾಂಧವ್ಯವನ್ನು ಗಾಢರಿಯಾಗುವ ಮಟ್ಟದ ವರೆಗೆ ತಂದಿದೆ ಎಂದು ವಾಷಿಂಗ್ಟನ್ ಪೋಸ್ಟ್ ಎಚ್ಚರಿಸಿದೆ.

## ಹಾಲು ಮೊಸರು ಇಲ್ಲ

ಹೈದರಾಬಾದು 26 — ಪಟ್ಟಣವಾಸಿಗಳಿಗೆ ಹಾಲು ಮತ್ತು ಮೊಸರು ಸರಬರಾಜು ಮಾಡುವ ಸಂಘಟನೆಯವರು ಸರಬರಾಜು ನಿಲ್ಲಿಸಿದರು ಆಹಾರ ಬೆರೆಕೆ ಶಾಸನದ ಪ್ರಕಾರ ಅಪರಾಧ ದಂಡನೆಗಳ ಅವಕಾಶ ಪ್ರತಿಭಟಿಸಿ ಸಂಘದವರು ಈ ಕ್ರಮ ಕೈಗೊಂಡರು ಹಾಲಿನ ಪುಡಿಯನ್ನು ಉಪಯೋಗಿಸಿ ಹೋಟಲಿನವರು ವ್ಯವಸ್ಥೆಗೊಳಿಸಿದರು.

## ಚೌ ಬರಬಹುದು

ಲಂಡನ್ 27 — ಈ ಶರತ್ಕಾಲದಲ್ಲಿ ಚೀನಾ ಪ್ರಧಾನಿ ಚೌ ಎನ್ ಲೈ ರವರು ನೇಪಾಳ ಮತ್ತು ಪಾಕಿಸ್ತಾನಕ್ಕೆ ಭೇಟಿಕೊಡುವಾಗ ಭಾರತಕ್ಕೆ ಭೇಟಿಕೊಡಬಹುದು ಚೀನಾ-ಭಾರತ ಗಡಿ ವಿವಾದದ ಚರ್ಚೆಗಾಗಿ ಅವರು ಬರುವರು

× ನವದೆಹಲಿ 27 — ಜೂನ್ 1 ರಿಂದ ಗೋವಾ, ದಿಯು, ದಾಮನ್ನಿಗೆ ಹೋಗಲು ಸರ್ಕಾರಿ ಅನುದಾರಿ ಪದ್ಧತಿ ರದ್ದು ಮಾಡುವದು

## ವೈದ್ಯಶಾಲೆಗಳು ಬೇಡ

ಬೆಂಗಳೂರು 27 — ಮೆಡಿಕಲ್ ಶಾಲೆಗಳು ಹೋಗಬೇಕು ಎಂದು ಭಾರತ ಸರ್ಕಾರದ ಆರೋಗ್ಯ ಮಂತ್ರಿ ಡಾ|| ಸುಶೀಲ ನಯ್ಯರ್ ತಿಳಿಸಿದರು ಕಡೆಯ ನಿರ್ಧಾರ ಸರ್ಕಾರದ್ದು. ಯಾವುದೇ ಬದಲಾವಣೆ ಆಗುವ ನೀತಿಯಿಂದ ವಿದ್ಯಾರ್ಥಿಗಳು ತೊಂದರೆಗೀಡಾಗಬಾರದು ಎಂದರು

## ಸಾಬೂನು ಉತ್ಪಾದನೆ

1960-61 ರಲ್ಲಿ 3 ಲಕ್ಷದ 70 ಸಹಸ್ರ ಟನ್ನುಗಳು ಸಾಬೂನು ಉತ್ಪಾದನೆ ಇದ್ದುದು 65-66 ರಲ್ಲಿ ಸುಮಾರು 5 ಲಕ್ಷ ಟನ್ನುಗಳಾಗುವುವು ಎಂದು ನವ ದೆಹಲಿ ವಾರ್ತೆ.

## ನಿಜವಲ್ಲ

ಹೈದರಾಬಾದು 27 — ಬಂಜರಿಂದ ಕೂಡಿದ ಅನಂತಪುರ ಜಿಲ್ಲೆಯಿಂದ ಕಷ್ಟದ ವೈಸೂರು ಪ್ರದೇಶಗಳಿಗೆ ಜನರು ವಲಸೆ ಹೋಗ ತ್ತಿರುವರೆಂಬ ದನ್ನು ಕಂದಾಯ ಮಂತ್ರಿ ಶ್ರೀ ಎ ರಾಮಚಂದ್ರ ರೆಡ್ಡಿಯವರು ತಿಳಿಸಿದರು

### ನಿರಾಕರಣೆ

ಕರಾಚಿ 27 — ಭದ್ರತಾ ಸಮಿತಿ ಪ್ರಯತ್ನಿಸುವ 5 ಪಶ್ಚಿಮ ದೇಶಗಳು ಕಾಶ್ಮೀರವನ್ನು ಕುರಿತು ಭಾರತ-ಪಾಕಿಸ್ತಾನ ಚರ್ಚೆ ಮಾಡಬೇಕೆಂಬ ಸೂಚನೆಯನ್ನು ಪಾಕಿಸ್ತಾನ ನಿರಾಕರಿಸಿದೆ

## ಗುಣ ಬಿಡದಿರಿ

ಮದ್ರಾಸು 27 — ಭಾರತ ಮಹಿಳೆಯರು ಏನನ್ನೇ ಮಾಡಿದರೂ ಅಗತ್ಯವಾದ ಸ್ತ್ರೀ ಗುಣಗಳನ್ನು ಬಿಡಕೂಡದೆಂಬುದಾಗಿ ರಾಷ್ಟ್ರಪತಿ ಡಾ|| ಎಸ್. ರಾಧಾಕೃಷ್ಣನ್ ರವರು ವೈಲಾವುರಿನಲ್ಲಿರುವ ಅಂಧ್ರ ಮಹಿಳಾ ಸಭಾದ ರಜತ ಮಹೋತ್ಸವದಲ್ಲಿ ಭಾಷಣಮಾಡುತ್ತಾ, ತಿಳಿಸಿದರು

## ಮಸೂದೆ ಬರಲಿದೆ

ವಾರ್ಧಾ 27 — ಇಂಗ್ಲೀಷಿನ ಈಗಿನ ಪರಿಸ್ಥಿತಿಯನ್ನು ಗಣನೆ ಮಾಡಿದ ಮಸೂದೆಯನ್ನು ಸರ್ಕಾರ ಮುಂದಿನ ಪಾರ್ಲಿಮೆಂಟಿನ ಅಧಿವೇಶನದಲ್ಲಿ ಪರಿಚಯಿಸುವುದಾಗಿ ಇಲ್ಲಿನ ರಾಷ್ಟ್ರಭಾಷಾ ಸಮಿತಿಯ ರಜತ ಮಹೋತ್ಸವದಲ್ಲಿ ಕೇಂದ್ರ ಗೃಹ ಮಂತ್ರಿ ಶ್ರೀ ಲಾಲ ಬಹದ್ದೂರ ಶಾಸ್ತ್ರಿಯವರು ತಿಳಿಸಿದರು

★

ವಾರ್ಧಾ 26 — ಯಾವುದೇ ಬಲವಂತ ಇಲ್ಲದೆ ಹಿಂದಿ ಕಲಿಯಲು ಅವಕಾಶ ಮಾಡುವುದಾದರೆ, ಹಿಂದಿ ಅಭಿವೃದ್ಧಿ ಆಗುವುದೆಂದು ಪಂ|| ನೆಹರು ರಾಷ್ಟ್ರಭಾಷಾ ಪ್ರಚಾರ ಸಮಿತಿಗೆ ಕಳಿಸಿದ ಸಂದೇಶದಲ್ಲಿ ತಿಳಿಸಿರುವರು

### ನಾಳೆಯ ಕಾರ್ಯಕ್ರಮ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ ದೈವಜ್ಞ ಶಿಖಾಮಣಿ
ಪಂಪಶ್ರೀ ಜೋಯಿಸರಿಂದ
29 ಏಕಾದಶಿ ಉಶ್ಚರಾಭಾದ್ರ

× ನವದೆಹಲಿ— ವಿದರಾಸಿನಲ್ಲಿ ತಿಗಣೆ ಕಾಟ ಜೋರಾಗಿದೆಯೆಂದೂ ರಾತ್ರಿ ಸಾವಿಗಟ್ಟಿ ಜನರು ಶವ್ಯ ಹಾಸಿಗೆ ಬಿಟ್ಟು ನಾಪಸ್ಥಾನದಿಂದ ಹೊರಗೆ ಬಂದು ಮಲಗುವರೆಂದು ಮದರಾಸಿನ ಡಾ | ಶ್ರೀನಿವಾಸನ್ನರು ಲೋಕಸಭೆಯಲ್ಲಿ ತಿಳಿಸಿದರು

× ಪಾಟಿಯಾಲಾ— ಪಂಜಾಬಿನಲ್ಲಿ ವಿಶಾಲನಿರೋಧ ಪ್ರಶ್ನೆ ಬಗ್ಗೆ ಅಲ್ಲಿ ಯ ವಯಸ್ಕ ಜನತೆಯು ಮತ ತೆಗೆದ ಕೊಳ್ಳಲು ಯೋಚಿಸುವುದಾಗಿ ಮುಖ್ಯಮಂತ್ರಿ ಕೈರಾನರು ಹೇಳಿದರು

ರಾವಲ್ಪಿಂಡಿ— ಪಾಕಿಸ್ತಾನದ ಚುನಾವಣೆಯಲ್ಲಿ ಸುಮಾರು 3000 ಪಾವಿತ್ರ ರೂಪಗಳಂತೆ ಲಂಚ ಕೊಟ್ಟ ಸಿದ್ಧಿಕಿ ರಾವೂಫ್ ಎಂಬಾತನಿಗೆ ಮೋಸ ಮಾಡಿದೆನೆಂದು ಮೋಸ ಅಭ್ಯರ್ಥಿ ಕಬೀರುಲ್ಲಾ ಚುನಾವಣಾ ಶಕಂಠರು ಅರ್ಜಿ ಸ್ವೀಕರಿಸಿದರು

## ಪ್ರಮುಖ ವೃತ್ತಾಂತಗಳು

ಮದರಾಸು—ರಾಷ್ಟ್ರಾಧ್ಯಕ್ಷರಾದನಂತರ ಪ್ರಪ್ರಥಮವಾಗಿ ಮದರಾಸಿಗೆ ಭೇಟಿಯಿತ್ತ ಡಾ॥ ರಾಧಾಕೃಷ್ಣನ್ರವರಿಗೆ ಅತ್ಯಾದರ ಸ್ವಾಗತ ಏರ್ಪಡಲಾಯಿತು

ನವಡೆಹಲಿ— ರಾಜ್ಯಗಳಲ್ಲಿ ಶಾಸನ ಮೇಲ್ಮನೆಗಳನ್ನು ರಚಿಸಬೇಕೆಂದು ಲೋಕಸಭೆಯಲ್ಲಿ ಅನೇಕರು ಅಭಿಪ್ರಾಯ ವ್ಯಕ್ತಪಡಿಸಿದರು

ಉಟಕಮಂಡ— ಕುಂಡಾಕ್ಕೆ ಹೋಗುತ್ತಿದ್ದ ಒಂದು ಕಾರು ದಾರಿತಪ್ಪಿ 200 ಅಡಿ ಕೆಳಗೆ ಉರುಳಿ ಬಿಳಗಿದ್ದ 5 ಮಂದಿ ಗಾಯಗೊಂಡರು

ಕೊಯಮುಕ್ಕೂರು 26— ಕರುಮುತ್ತೈವೆಟಾಲಿಸಲ್ಲಿ ಎರಡು ಲಾರಿಗಳು ಡಿಕ್ಕಿ ಹೊಡೆದು ಐದು ಮಂದಿ ನುಜ್ಜುನುಜ್ಜಾಗಿ ಸತ್ತರು

ವಿಾರತ— ಪಿಎಸ್ಪಿ ನುತ್ತು ಸೋಷಲಿಸ್ಟ್ ಪಕ್ಷಗಳ ವಿಲಯ ಬಗ್ಗೆ ಆ ಪಕ್ಷಗಳ ಪ್ರಮುಖರು ಶ್ರೀ ಜಯಪ್ರಕಾಶ ನಾರಾಯಣರು ಮುತ್ತು ಆಚಾರ್ಯ ಕೃಪಾಲಿನಿಯವರನ್ನು ಕಾಣಲು ಯೋಚಿಸಿರುವರು

ನವಡೆಹಲಿ— ಗಡಿಯಾಚೆಗಳ ಅಕ್ರಮ ಸ್ವಾಧೀನೆಯ ಅಂತರಾಷ್ಟ್ರೀಯ ಕಂಡದಲ್ಲಿ ಇಬ್ಬರು ಅಮೇರಿಕಾ ರಾಜಕೀಯವೇತ್ತರು ಸಿಕ್ಕಿಬಿದ್ದಿರುವರು . ಈ ತಂಡವು 7 ಲಕ್ಷ ರೂಗಳಿಗೂ ಹೆಚ್ಚು ಗಡಿಯಾಚೆಗಳನ್ನು ದೇಶಕ್ಕೆ ಅಕ್ರಮ ಸಾಗಾಣಿಕೆ ಮಾಡಿದೆ

ಲಂಡನ್— ಡಿಸೆಂಬರು 31 ಕ್ಕೆ ಮುಗಿದ ವರ್ಷದಲ್ಲಿ ಬ್ರಿಟನ್ ಕುದುರೆ ಜೂಜಿನಲ್ಲಿ ಟೋಟ್ ಮೂಲಕ 33247658 ಪೌಂಡು ದೊರೆತಿದೆ

ಲಂಡನ್— ಈ ಸಾರಿಯ ಕೌಂಟಿ ಕ್ರಿಕೆಟ್ ಚಾಂಪಿಯನ್ನಷಿಪ್‌ನಲ್ಲಿ ಪ್ರಮುಖ ಸಾಹಸ ಕಾರ್ಯ ಪ್ರದರ್ಶಿಸುವ ಆಟಗಾರನಿಗೆ 500 ಪೌಂಡುಗಳನ್ನು ಬಹುಮಾನಿಸುವುದಾಗಿ ಒಂದು ಕಂಪೆನಿ ತಿಳಿಸಿದೆ.

ಲಂಡನ್— ನಾಲ್ಕನೇ ಫಾರಂನಲ್ಲಿ ಓದುತ್ತಿರುವ 15 ವರ್ಷದ ಫ್ರಾಂಕ್ ಬಾರ್ಲೊ ಒಳ್ಳೆಯ ಫುಟ್‌ಬಾಲ್ ಆಟಗಾರನಾಗಿದ್ದಾನೆ ; ಇನ್ನು 2-3 ವರ್ಷಗಳಲ್ಲಿ ಪ್ರಸಿದ್ಧ ಆಟಗಾರನಾಗಿ ವರ್ಷಕ್ಕೆ 2500 ರಿಂದ 3000 ಪೌಂಡುಗಳನ್ನು ಪಡೆಯಬಲ್ಲನು ; ಆದರೆ ಅವನು ವಿಶ್ವವಿದ್ಯಾನಿಲಯದಲ್ಲಿ ಸ್ಥಾನ ಪಡೆಯಬೇಕೆಂಬ ಆಶೆ ಹೊಂದಿರುವನು : ಕಸಿದಿನ ಫುಟ್‌ಬಾಲು ಆಟಗಾರನಾಗುವುದಂ ಜೊತೆಗೆ ಬೇರೆ ಕಸುಬಿಗೂ ತಯಾರಿಂಬೇಕೆಂದು ಅವನ ಆಶಯ.

---

## ವಿವಾಹಮಹೋತ್ಸವ

ಲೇಟ್ ರಾವ್ ಸಾಹೆಬ್ ಬಿ. ಮುನಿವೆಂಕಟಪ್ಪನವರ ಪುತ್ರ ಶ್ರೀ ಬಿ ಎಂ. ಗೋವಿಂದಸ್ವಾಮಿಯವರು ತಮ್ಮ ಸಹೋದರ ಶ್ರೀ ಬಿ. ಎಂ. ಶ್ರೀನಿವಾಸಮೂರ್ತಿಯವರ ಪುತ್ರಿ ಚಿ॥ ಸೌ॥ ರಾಜೇಶ್ವರಿಯನ್ನು, ಬೆಂಗಳೂರು ವಿಶ್ವೇಶ್ವರಪುರದಲ್ಲಿನ ಕಂಟ್ರಾಕ್ಟರ್ ಶ್ರೀ ಜೆ ಎಂ. ಮುನಿವೆಂಕಟರಾಮಯ್ಯನವರ ಪುತ್ರ ಚಿ॥ ಎಂ. ಪದ್ಮನಾರಾಯಣ, ಬಿ ಇ, ರವರಿಗೆ ಕೊಟ್ಟು ವಿವಾಹಮಹೋತ್ಸವವನ್ನು ಬೆಂಗಳೂರು ಸೌತ್ ಎಂಡ್ ರೋಡ್‌ನಲ್ಲಿರುವ ಗೈನೈಟ್ ಫ್ಯಾಕ್ಟರಿಯಲ್ಲಿ ವೈಭವವಾಗಿ ನೆರವೇರಿಸಿದರು.

---


**ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ**

**" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ**

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯ ದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ಧಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು



**ವುಡ್‌ಲ್ಯಾಂಡ್ಸ್** ಆಕರ್ಷಣೀಯ 16 ನೇ ವಾರ

**ಜಂಗ್ಲಿ (ಹಿಂದಿ) Junglee**

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ ದಿನವಹಿ 3 ಪ್ರದರ್ಶನಗಳು ]

---

**ಆಪೆರಾ— 25-5-62 ರಿಂದ**

**ಮಾಮಿಯಾರುಂ ಒರವೀಟು ಮರುಮಗಳೇ [ ತಮಿಳು ]**

ನಟವರ್ಗ— ಎಂ ಎ ರಾಜಂ, ದೇವಿಕಾ, ಬಾಲಾಜಿ, ರಾಜೇಂದ್ರನ್

[ ದಿನವಹಿ 3 ಆಟಗಳು ]

ಹೆನ್ರಿ ವಾರ್ಟ್ ಸ್ಟಾನ್ಲೆಯವರನ್ನು ಕುರಿತ ಚಿತ್ರಗಳು


**Help The 'Gorakshana'**

**Advertise in Goraksana and help the pious cause**



Edited, Printed & Published by the Proprietor, Dharma Prachara Nirata M. S. Krishna Rao, at Satyavadi Press Chamarajapuram, Mysore 4.